ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ – ೪ಎ **Part – IVA**	ಬೆಂಗಳೂರು, ಮಂಗಳವಾರ, ೧೪, ಜುಲೈ, ೨೦೨೬ (ಆಷಾಢ, ೨೩, ಶಕವರ್ಷ, ೧೯೪೮) BENGALURU, TUESDAY, 14, JULY, 2026 (ASHADHA, 23, SHAKAVARSHA, 1948)	ನಂ. ೫೨೧ **No. 521**

ಕರ್ನಾಟಕ ಸರ್ಕಾರ

ಸಂಖ್ಯೆ: ಇಪಿ 9 ಡಿಪಿಐ 2026

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಡಾ|| ಬಿ.ಆರ್. ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ: 14.07.2026.

ಅಧಿಸೂಚನೆ-II

ಕರ್ನಾಟಕ ನಾಗರೀಕ ಸೇವೆಗಳ ಅಧಿನಿಯಮ, 1978 (1990ರ ಕರ್ನಾಟಕ ಅಧಿನಿಯಮ 14) ರ ಕಲಂ-3ನೇ ಪ್ರಕರಣದ (2)ನೇ ಉಪ ಪ್ರಕರಣದ (ಎ) ಖಂಡವನ್ನು 8ನೇ ಪ್ರಕರಣದೊಡನೆ ಓದಿಕೊಂಡಂತೆ ಮತ್ತು ತನ್ಮೂಲಕ ಅಗತ್ಯಪಡಿಸಲಾದಂತೆ ಕರ್ನಾಟಕ ಸಾಮಾನ್ಯ ಸೇವೆಗಳು (ಪದವಿ ಪೂರ್ವ ಶಿಕ್ಷಣ) (ನೇಮಕಾತಿ) (ತಿದ್ದುಪಡಿ) ನಿಯಮಗಳು, 2026ರ ಕರಡನ್ನು ದಿನಾಂಕ: 18.06.2026 ರಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯ ಭಾಗ – IVA (ಸಂಖ್ಯೆ: 454) ರಲ್ಲಿ ಪ್ರಕಟಿಸಿ, ಪ್ರಕಟಣೆಯ ದಿನಾಂಕದಿಂದ ಏಳು ದಿನಗಳೊಳಗಾಗಿ ಅದರಿಂದ ಭಾದಿತರಾಗುವ ಸಂಭವವಿರುವ ಎಲ್ಲಾ ವ್ಯಕ್ತಿಗಳಿಂದ ಆಕ್ಷೇಪಣೆಗಳನ್ನು ಮತ್ತು ಸಲಹೆಗಳನ್ನು ಆಹ್ವಾನಿಸಲಾಗಿರುವುದರಿಂದ;

ಸದರಿ ವಿಶೇಷ ಸಂಚಿಕೆಯ ರಾಜ್ಯ ಪತ್ರವನ್ನು ದಿನಾಂಕ: 18.06.2026 ರಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿರುವುದರಿಂದ ;

ಮತ್ತು ಸದರಿ ಕರಡು ತಿದ್ದುಪಡಿ ನಿಯಮಗಳ ಬಗ್ಗೆ ಸಾರ್ವಜನಿಕರಿಂದ ಸ್ವೀಕೃತವಾಗಿರುವ ಆಕ್ಷೇಪಣೆ ಮತ್ತು ಸಲಹೆಗಳನ್ನು ರಾಜ್ಯ ಸರ್ಕಾರವು ಪರಿಗಣಿಸಲಾಗಿದೆ.

ಈಗ ಕರ್ನಾಟಕ ನಾಗರೀಕ ಸೇವೆಗಳು ಅಧಿನಿಯಮ 1978 (1990ರ ಕರ್ನಾಟಕ ಅಧಿನಿಯಮ 14) ರ 8ನೇ ಪ್ರಕರಣದೊಂದಿಗೆ ಓದಿಕೊಂಡು 3ನೇ ಪ್ರಕರಣದ (1) ನೇ ಉಪ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸಾಮಾನ್ಯ ಸೇವೆಗಳು (ಪದವಿ ಪೂರ್ವ ಶಿಕ್ಷಣ) (ನೇಮಕಾತಿ) ನಿಯಮಗಳು, 2013ಕ್ಕೆ ಮತ್ತಷ್ಟು ತಿದ್ದುಪಡಿ ಮಾಡಲು ಕರ್ನಾಟಕ ಸರ್ಕಾರವು ಈ ಕೆಳಕಂಡ ನಿಯಮಗಳನ್ನು ರಚಿಸಿದೆ, ಎಂದರೆ

ನಿಯಮಗಳು

1. **ಶೀರ್ಷಿಕೆ ಮತ್ತು ಪ್ರಾರಂಭ:** (1) ಈ ನಿಯಮಗಳನ್ನು ಕರ್ನಾಟಕ ಸಾಮಾನ್ಯ ಸೇವೆಗಳು (ಪದವಿ ಪೂರ್ವ ಶಿಕ್ಷಣ) (ನೇಮಕಾತಿ) (ತಿದ್ದುಪಡಿ) ನಿಯಮಗಳು, 2026 ಎಂದು ಕರೆಯತಕ್ಕದ್ದು.

(2) ಈ ನಿಯಮಗಳು ಕರ್ನಾಟಕ ರಾಜ್ಯಪತ್ರದಲ್ಲಿ ಅಂತಿಮವಾಗಿ ಪ್ರಕಟಗೊಂಡ ದಿನಾಂಕದಿಂದ ಜಾರಿಯಾಗತಕ್ಕದ್ದು.

2. **ಕೋಷ್ಟಕದ ತಿದ್ದುಪಡಿ:** ಕರ್ನಾಟಕ ಸಾಮಾನ್ಯ ಸೇವೆಗಳು (ಪದವಿ ಪೂರ್ವ ಶಿಕ್ಷಣ) (ನೇಮಕಾತಿ) ನಿಯಮಗಳು, 2013ರ ಕೋಷ್ಟಕದ ಕ್ರಮ ಸಂಖ್ಯೆ: 10ರಲ್ಲಿ "ಉಪನ್ಯಾಸಕರು, ಸರ್ಕಾರಿ ಪದವಿ ಪೂರ್ವ ಕಾಲೇಜುಗಳು" ರ ಅಂಕಣ ಸಂಖ್ಯೆ:4ರಲ್ಲಿನ ಆಯ್ಕೆ ವಿಧಾನ ಶೀರ್ಷಿಕೆಯ ಕೊನೆಯಲ್ಲಿ ಈ ಕೆಳಗಿನಂತೆ ಸೇರ್ಪಡೆಗೊಳಿಸತಕ್ಕದ್ದು ,-

> "ನೇರ ನೇಮಕಾತಿ ಮತ್ತು ಬಡ್ತಿಯ ಮೂಲಕ ಇನ್ನು ಮುಂದೆ ನೇಮಕಗೊಳ್ಳುವ ಉಪನ್ಯಾಸಕರು ಸರ್ಕಾರವು ನಿರ್ದಿಷ್ಟಪಡಿಸಿದ ಶಿಕ್ಷಣ ಸಂಸ್ಥೆಗಳಲ್ಲಿ 9 ಮತ್ತು 10 ನೇ ತರಗತಿಗಳನ್ನು ಬೋಧಿಸತಕ್ಕದ್ದು."

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಬಿ.ಕೆ.ಮಮತಾ ರಾಣಿ)
ಸರ್ಕಾರದ ಅಧೀನ ಕಾರ್ಯದರ್ಶಿ (ಆಡಳಿತ)(ಪ್ರ),
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ.

GOVERNMENT OF KARNATAKA

No.EP 9 DPI 2026

Karnataka Government Secretariat
M.S.Building,
Dr|| B.R. Ambedkar Veedhi,
Bengaluru, Dated:14.07.2026.

NOTIFICATION-II

Whereas the draft of the Karnataka General Services (Pre-University Education) (Recruitment) (Amendment) Rules, 2026 was published as required by clause (a) of sub-section (2) of section 3 read with Section 8 of the Karnataka State Civil Services Act, 1978 (Karnataka Act 14 of 1990) dated: 18.06.2026 in Part-IVA (No.454) of the Karnataka Gazette Extraordinary inviting objections and suggestions from all persons likely to be affected thereby within seven days from the date of its publication in the official Gazette.

Whereas the said Gazette was made available to the public on 18.06.2026.

And whereas the objections and suggestions received from the public have been considered by the Government.

Now, therefore, in exercise of the powers conferred by sub-section (1) of section 3 read with section 8 of the Karnataka State Civil Services Act, 1978

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment **WPP No. 297**

(Karnataka Act 14 of 1990), the Government of Karnataka hereby makes the following rules further to amend the Karnataka General Services (Pre-University Education) (Recruitment) (Amendment) Rules, 2013, namely.

<u>RULES</u>

1. **Title and commencement.-** (1) These rules may be called the Karnataka General Services (Pre-University Education) (Recruitment) (Amendment) Rules, 2026.

(2) They shall come into force from date of their final publication in the Official Gazette.

2. **Amendment of Schedule.-** In the Karnataka General Services (Pre-University Education) (Recruitment) Rules, 2013, in the schedule, in Sl.No.10, for the category of the post "Lecturers, Government Pre-University Colleges", under the heading " Method of Recruitment ", in column (4), the following shall be inserted at the end namely,-.

> "The Lecturers who are appointed herein after by direct recruitment and promotion shall teach 9th and 10th class also in educational institutions specified by the Government."

By Order and in the name of the
Governor of Karnataka,

(B.K.Mamatha Rani)
Under Secretary to Government (Admin)(I/c)
Department of School Education & Literacy

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

MADESHWARA NARASIMHA
MURTHY JAYASIMHA